| ಕ್ರಿಮಿನಲ್‌ಪ್ರಕರಣ ಸಂಖ್ಯೆ | 203/2017 |
|---|---|

ದಿನಾಂಕ 13-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 1 ಫ್ರಾಸಾಃ 1

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ವಕೀಲರಾದ ಶ್ರೀ ವಿ.ಎಂ.ಎಂ. ರವರಿಂದ:**

ನಾನು ದೂರನ್ನು ಬಾಯಿಮಾತಿನಿಂದ ಹೇಳಿದ್ದೆ. ಪೋಲಿಸ್ ಠಾಣೆಗೆ ನಾವು 7-8 ಜನರು ಕೂಡಿ ಬಂದಿದ್ದೆವು. ದೂರಿನಲ್ಲಿ ಯಾರ ಹೆಸರನ್ನು ನಾನು ತೋರಿಸಿರುವುದಿಲ್ಲ. ದೂರನ್ನು ಕೊಟ್ಟ ನಂತರ ಪೋಲಿಸರು ನನ್ನ ಪುರವಣಿಗೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ದೂರಿನಲ್ಲಿ ಬರೆದಿರುವ ವಿಷಯವನ್ನು ಪೋಲಿಸರು ನನಗೆ ಓದಿ ಹೇಳಿರುವುದಿಲ್ಲ.

ನಮ್ಮ ಊರಿನಿಂದ ಘಟನೆ ಸ್ಥಳವು ಪಶ್ಚಿಮ ದಿಕ್ಕಿಗೆ ಇದ್ದು ಅದು 1 ಕಿ.ಮೀ. ಅಂತರದಲ್ಲಿ ಇರುತ್ತದೆ. ಕಂಬಗಳು 1ನೇ ಆರೋಪಿತನ ಹೊಲದಲ್ಲಿ ಇದ್ದವು. 1ನೇ ಆರೋಪಿತನ ಜಮೀನಿನ ಸರ್ವೆ ನಂಬರ್ 10 ಇರುತ್ತದೆ. ಸರ್ವೆ ನಂಬರ್ 10 ರಲ್ಲಿ 7-8 ಜನರ ಜಮೀನುಗಳು ಇರುತ್ತವೆ. 1ನೇ ಆರೋಪಿತನು ಎಷ್ಟು ಜಮೀನನ್ನು ಹೊಂದಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. 1ನೇ ಆರೋಪಿತನ ಪೂರ್ವಕ್ಕೆ ಅಯ್ಯಾಳಪ್ಪ ಪೂಜಾರಿರವರ ಜಮೀನು ಇರುತ್ತದೆ. ಪಶ್ಚಿಮಕ್ಕೆ ಕೃಷ್ಣ ನದಿ ಇರುತ್ತದೆ. ಉತ್ತರಕ್ಕೆ ಹಳೆಮನೆ ಶಿವನಗೌಡರವರ ಹೊಲ ಇರುತ್ತದೆ. ದಕ್ಷಿಣಕ್ಕೆ ಬಾಗಮ್ಮಳ ಜಮೀನು ಇರುತ್ತದೆ.

ವಿದ್ಯುತ್ ಕಂಬಗಳು 3-4 ಇರುತ್ತವೆ. ಶಿವನಗೌಡ ಹಾಗೂ ಉಳಿದವರು ಪಂಪ್ ಸೆಟ್ ಮಾಡಿರುತ್ತಾರೆ ಎಂದರೆ ಸರಿ. ಸುಮಾರು 5-6 ಜನರು ಪಂಪ್ ಸೆಟ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಇನ್ನು ಹೆಚ್ಚಿಗೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಅವು ಎಲ್ಲಾ ಪಂಪ್ ಸೆಟ್ ಗಳು ನದಿ ದಂಡೆಯ ಮೇಲೆ ಇರುತ್ತವೆ ಎಂದರೆ ಸರಿ. ಕಂಬಗಳು ಯಾರ್ಯಾರ ಹೊಲದಲ್ಲಿ ಹೋಗಿರುತ್ತವೆ ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಹಳೆಮನೆರವರ ಜಮೀನಿನಲ್ಲಿ ಹೋಗಿರುತ್ತವೆ, ಶಿವನಗೌಡ ಜಮೀನಿನಲ್ಲಿ 2 ಕಂಬಗಳು ಇರುತ್ತವೆ. ವೆಂಕಟೇಶಗೌಡನ ಜಮೀನಿನಲ್ಲಿ 2 ಕಂಬಗಳು ಇರುತ್ತವೆ ಹೀಗೆ ಕಂಬಗಳು ಇರುತ್ತವೆ.

ದಿನಾಂಕ 31-08-2014 ರಂದು ನಮ್ಮ ಊರಲ್ಲಿ ಬಹಳ ಗಾಳಿಯಾಗಿ ಮಳೆಯಾಗಿತ್ತು ಎಂದರೆ ಸರಿ. ದಿ:30-08-2014 ರಂದು ರಾತ್ರಿ ಸಮಯದಲ್ಲಿ ಬಹಳ ಮಳೆ ಆಗಿತ್ತು. ಮಳೆ ಗಾಳಿ ಬಂದಿದ್ದರಿಂದ ಕಂಬಗಳು ಬಿದ್ದಿದ್ದವು ಎಂದರೆ ಸರಿ. ವಿದ್ಯುತ್ ಕಂಬದ ತಂತಿ ಬೇರೆ ಇರುತ್ತದೆ ಹಾಗೂ ಸೋಲಾರ್ ತಂತಿ ಬೇರೆ ಇರುತ್ತದೆ ಎಂದರೆ ಸರಿ. ಸೋಲಾರ್ ತಂತಿಯಲ್ಲಿ ಕರೆಂಟ್ ಇರುವುದಿಲ್ಲ ಎಂದರೆ ಸರಿ. ವಿದ್ಯುತ್ ತಂತಿಯಲ್ಲಿ ಕರೆಂಟ್ ಇರುತ್ತದೆ ಎಂದರೆ ಸರಿ. ಸೋಲಾರ್ ತಂತಿಯಿಂದ ಮನುಷ್ಯರಿಗಾಗಲೀ ಅಥವಾ ಪ್ರಾಣಿಗಳಿಗಾಗಲೀ ತಾಗಿದರೆ ಯಾವುದೇ ರೀತಿಯ ಪ್ರಾಣ ಹಾನಿ ಆಗುವುದಿಲ್ಲ ಎಂದರೆ ಸರಿ. ವಿದ್ಯುತ್ ತಂತಿ ಯಾರ ಹೊಲದಿಂದ ಬಿದ್ದಿತ್ತು ಎಂದರೆ ಸಾಕ್ಷಿಯು 2 ನೇ ಆರೋಪಿತನ ಹೊಲದಿಂದ ಬಿದ್ದಿತ್ತು. 2 ನೇ ಆರೋಪಿತನ ಹೊಲವನ್ನು 1 ನೇ ಆರೋಪಿತನು ದನಗಳ ಮೇವುನ ಸಲುವಾಗಿ ತೆಗೆದುಕೊಂಡಿದ್ದನು.  ಕಂಬಗಳು ಇದ್ದ ಬಗ್ಗೆ ದೂರಿನಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಪೋಲಿಸರು ಪಂಚನಾಮೆಯನ್ನು ಜಾಗದ ಮೇಲೆ ಮಾಡಿದ್ದರು. ಮಧ್ಯಹ್ನ 12-00 ರಿಂದ 1-00 ಗಂಟೆಯವರೆಗೆ ಪಂಚನಾಮೆ ಮಾಡಲು ಸಮಯ ಆಗಿತ್ತು. ಪಂಚನಾಮೆ ಮಾಡುವ ಕಾಲಕ್ಕೆ ಬಹಳ ಜನರು ಇದ್ದರು. ಯಾರು ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪಂಚನಾಮೆಗೆ ಯಾರ್ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಗುನ್ನ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ. ಈ ಪ್ರಕರಣದ ಅಪಘಾತವು ಜಮೀನಿನ ಒಡ್ಡಿನ ಮೇಲೆ ಆಗಿತ್ತು. ಒಡ್ಡು 2 ಅಡಿ ಅಷ್ಟು ಇರುತ್ತದೆ. ಕಂಬ ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿನ ಕಡೆಗೆ ಬಿದ್ದಿತ್ತು. ವಿದ್ಯುತ್ ತಂತಿಯು ನಿಮ್ಮ ಹುಡುಗನಿಗೆ ಸ್ಪರ್ಷ ಆಗಿತ್ತಾ ಅಥವಾ ಇಲ್ಲವೋ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಇರಲಿಲ್ಲ ಆ ಕಾರಣ ನನಗೆ ತಂತಿ ತಾಗಿದ ಬಗ್ಗೆ ಗೊತ್ತಿರುವುದಿಲ್ಲ ಆದರೆ ನನ್ನ ಅಳಿಯ ಬಂದು ಈ ವಿಷಯವನ್ನು ನನಗೆ ಹೇಳಿದ್ದನು. ಬೆಳಿಗ್ಗೆ 9-30 ಗಂಟೆಗೆ ನನ್ನ ಅಳಿಯ ಬಂದು ವಿಷಯವನ್ನು ಹೇಳಿದ್ದನು. ನನ್ನ ಅಳಿಯನ ಹೆಸರು ನಿಂಗಪ್ಪ ತಂದೆ ದಂಡಪ್ಪ ಇರುತ್ತದೆ.

ವಿದ್ಯುತ್ ಕಂಬವು 1 ನೇ ಆರೋಪಿತನ ಹೊಲದಲ್ಲಿ ಇರುವುದಿಲ್ಲ ಅದು ಶಿವನಗೌಡನ ಹೊಲದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಹುಡುಗನಾದ ಶರಣಬಸವನ ಜೊತೆಗೆ ನಿಂಗಪ್ಪ ಮತ್ತು ಮಲ್ಲಪ್ಪ ಹೋಗಿದ್ದರು. ದೂರಿನಲ್ಲಿ ಮಾಡಿದ ಆಪಾದನೆ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಆಪಾದನೆಯು ಸಹ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ವಿದ್ಯುತ್ ಕಂಬ ಬಿದ್ದ ಘಟನೆಯಾಗಿದ್ದಕ್ಕೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಿದ್ಯುತ್ ಕಂಬವು ಆರೋಪಿತರ ಜಮೀನಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ

ಯಾವುದೇ ರೀತಿಯ ನಿರ್ಲಕ್ಷತನ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹುಡುಗನ ನಿರ್ಲಕ್ಷತನದಿಂದ ಈ ಪ್ರಕರಣದ ಘಟನೆಯಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರಿಂದ ಪರಿಹಾರ ಧನವನ್ನು ಪಡೆಯುವಗೋಸ್ಕರ ನಾನು ಅವರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಕಂಬಗಳು ಆರೋಪಿತರ ಜಮೀನಿನಲ್ಲಿ ಇದ್ದ ಬಗ್ಗೆ ದೂರಿನಲ್ಲಾಗಲೀ ಅಥವಾ ಪಂಚನಾಮೆಯಲ್ಲಾಗಲೀ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಹಣವನ್ನು ಪಡೆಯುವಗೋಸ್ಕರ ನಾನು ಆರೋಪಿತರ ವಿರುದ್ದ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಯ್ಯಾಳಪ್ಪ ಪೂಜಾರಿಯವರ ಜಮೀನಿನಲ್ಲಿ ಜಾಲಿ ಗಿಡಗಳು ಇದ್ದವು. ಆವತ್ತು ಶಿವನಗೌಡನ ಜಮೀನಿನಲ್ಲಿ ಯಾವ ಬೆಳೆ ಇತ್ತು ಎಂದರೆ ಸಾಕ್ಷಿಯು ಈ ಪ್ರಕರಣದ ಘಟನೆಯಾಗಿ ೨ ವರ್ಷಗಳು ಆಗಿರುತ್ತವೆ ಆದ್ದರಿಂದ ಆವತ್ತು ಸದರಿ ಜಮೀನಿನಲ್ಲಿ ಯಾವ ಬೆಳೆ ಇತ್ತು ಎಂದು ಹೇಳಲು ಸಾಧ್ಯ ಆದರೆ ಅಲ್ಲಿ ಕಂಬ ಇತ್ತು. ಆರೋಪಿತರು ಯಾವುದೇ ತಪ್ಪು ಮಾಡದೆ ಇದ್ದರು ಸಹ ನಾನು ಅವರ ವಿರುದ್ದ ಸುಳ್ಳು ಕೇಸು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಜೆ.ಎಂ.ಎಫ್.ಸಿ., ದೇವದುರ್ಗ

| ಕ್ರಿಮಿನಲ್‌ಪ್ರಕರಣ ಸಂಖ್ಯೆ | 203/2017 |
|---|---|

ದಿನಾಂಕ 13-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 3 ಫ್ರಾಸಾಃ 2

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ವಕೀಲರಾದ ಶ್ರೀ ವಿ.ಎಂ.ಎಂ. ರವರಿಂದ:**

ದೂರುದಾರ ನನ್ನ ಮಾವನಾಗಬೇಕು. ದೂರುದಾರ ನನ್ನ ಅಕ್ಕನ ಗಂಡನಾಗಿರುತ್ತಾನೆ. ನನ್ನ ಸ್ವಂತ ಊರು ಕೋಣಚಪ್ಪಳಿ ಇರುತ್ತದೆ ಎಂದರೆ ಸರಿ. ಮೃತ ಶರಣಬಸವ ನನ್ನ ಮಾವನಾಗಬೇಕು. ಆತನು ನನ್ನ ಖಾಸ ಅಕ್ಕನ ಮಗ ಇರತ್ತಾನೆ ಎಂದರೆ ಸರಿ. ನಮ್ಮೂರಿನಿಂದ ಅಪಘಾತ ಸ್ಥಳವು ಉತ್ತರ ದಿಕ್ಕಿನ ಕಡೆಗೆ ಇರುತ್ತದೆ ಅದು 1 ಕಿ.ಮೀ. ನ ಅಂತರದಲ್ಲಿರುತ್ತದೆ. ನಾವು ಒಟ್ಟು 3 ಜನರು ಹೋಗಿದ್ದೆವು. ನಾವು 2 ನೇ ಆರೋಪಿತನ ಹೊಲದಲ್ಲಿ ಮೇವು ಮಾಡಿದ್ದೆವು. 2 ನೇ ಆರೋಪಿತನ ಹೊಲದಲ್ಲಿ ಮೇವು ಮಾಡಿದ್ದೆವು. ನಾವು ಬೆಳಿಗ್ಗೆ 7–00 ಗಂಟೆ ಸಮಯಕ್ಕೆ ಮೇವು ತರಲು ಹೊಲಕ್ಕೆ ಹೋಗಿದ್ದೆವು. ನಾವು ಮೇವನ್ನು ತರಲು ಹೋಗಬೇಕಾದರೆ ಸೋಲಾರ್ ತಂತಿಯನ್ನು ದಾಟಿ ಹೋಗಿದ್ದೆವು ಎಂದರೆ ಸರಿ. ನಾವು ಹೋಗುವ ಕಾಲಕ್ಕೆ ಸೋಲಾರ್ ತಂತಿ ನಮಗೆ ತಾಗಿರಲಿಲ್ಲ. 1 ನೇ ಆರೋಪಿತನ ಜಮೀನಿನಲ್ಲಿ 3–4 ಕಂಬಗಳು ಇರಬಹುದು. ಸದರಿ ಕಂಬಗಳು ದಕ್ಷಿಣ ದಿಕ್ಕಿನಿಂದ ಉತ್ತರ ದಿಕ್ಕಿನ ಕಡೆಗೆ ಇರುತ್ತವೆ. 1 ನೇ ಆರೋಪಿತನ ಜಮೀನಿನ ಉತ್ತರಕ್ಕೆ ಶಿವನಗೌಡನ ಜಮೀನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಶಿವನಗೌಡನ ಜಮೀನಿನಲ್ಲಿ ಕಂಬಗಳು ಇದ್ದವು. ಅಲ್ಲಿ ಇರುತಕ್ಕಂತಹ ಎಷ್ಟು ಕಂಬಗಳು ಬಿದ್ದಿದ್ದವು ಎಂದರೆ ಸಾಕ್ಷಿಯು 2 ಕಂಬಗಳು ಬಿದ್ದಿದ್ದವು ಎಂದು ಹೇಳುತ್ತಾರೆ. 1 ನೇ ಆರೋಪಿತನ ಹೊಲದಿಂದ 2 ಕಂಬಗಳು ಬಿದ್ದಿದ್ದವು. ಕಂಬ ಬಿದ್ದು ತಂತಿ ಸೋಲಾರ್ ತಂತಿಗೆ ಜಾಯಿಂಟ್ ಆಗಿತ್ತು. ಮಳೆ ಗಾಳಿ ಆಗಿದ್ದರಿಂದ ವಿದ್ಯುತ್ ಕಂಬಗಳು ಬಿದ್ದಿದ್ದವು. ಆವತ್ತು ಮಳೆ ಗಾಳಿ ಹೆಚ್ಚಾಗಿ ನೀರು ಕೊಚ್ಚಿಕೊಂಡು ಹೋಗಿರುವ ಕಾರಣ ಕಂಬಗಳು ಬಿದ್ದಿದ್ದವು. ಆವತ್ತು ಮಳೆಯಾಗಿ ಜಮೀನಿನಲ್ಲಿ ನೀರು ಇದ್ದಿದ್ದರಿಂದ ಸದರಿ ಜಮೀನಿನಲ್ಲಿ ಕೆಸರಾಗಿರುವ ಕಾರಣ ನಿಮಗೆ ಜಮೀನಿನಲ್ಲಿ ಹೋಗಬೇಕು ಅನಿಸಿತೋ ಅಥವಾ ಇಲ್ಲವೂ ಎಂದರೆ ಸಾಕ್ಷಿಯು ನಮಗೆ ಅನಿಸಿತ್ತು ಎಂದು ಹೇಳುತ್ತಾರೆ. ಆರೋಪಿತರ ಜಮೀನಿನ ಸುತ್ತಮುತ್ತಲು ಸೋಲಾರ್ ತಂತಿ ಹಾಕಿರುವ ಕಾರಣ ಸದರಿ ಜಮೀನಿನಲ್ಲಿ

ಹೋಗಲು ದಾರಿ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ತಂತಿ ನಮಗೆ ತಾಗಲಾರದೆ ಬಾಗಿ ನಾವು ಜಮೀನಿನ ಒಳಗಡೆ ಹೋಗಿದ್ದೆವು ಎಂದು ಹೇಳುತ್ತಾರೆ. ಜಮೀನಿನ ಮಾಲೀಕರ ಅಪ್ಪಣೆ ಇಲ್ಲದೆ ನಾವು ಕಳುವಿನಿಂದ ಅಲ್ಲಿಗೆ ಹೋಗಿದ್ದೆವು ಎಂದರೆ ಸರಿ. ಸದರಿ ಕಂಬಗಳು ಶಿವನಗೌಡನ ಜಮೀನಿನಲ್ಲಿ ಇರುತಕ್ಕಂತಹ ಕಂಬಗಳು ಇದ್ದವು ಎಂದರೆ ಸರಿಯಲ್ಲ. ನಾವು ಕಳುವಿನಿಂದ ಮೇವು ತರಲು ಹೋದ ವಿಷಯ ಆರೋಪಿತರಿಗೆ ಗೊತ್ತಿರಲಿಲ್ಲ ಎಂದರೆ ಸರಿ. ಆರೋಪಿತರು ನಮಗೆ ಹೊಲದಲ್ಲಿ ಬಾ ಎಂದು ಕರೆದಿರಲಿಲ್ಲ. ಆ ದಿನ 2 ನೇ ಆರೋಪಿತನು ಊರಲ್ಲಿ ಇದ್ದನು 1 ನೇ ಆರೋಪಿತನು ಊರಲ್ಲಿ ಇರಲಿಲ್ಲ. 2 ನೇ ಆರೋಪಿತನಿಗೆ ತಿಳಿಸಿ ನಾವು ಜಮೀನಿಗೆ ಹೋಗಿರಲಿಲ್ಲ. 2 ನೇ ಆರೋಪಿತನು ಆ ಸಮಯದಲ್ಲಿ ಬಂದಿರಲಿಲ್ಲ. ಸೋಲಾರ್ ತಂತಿನೆ ಬೇರೆ ಹಾಗೂ ವಿದ್ಯುತ್ ತಂತಿನೆ ಬೇರೆ ಇರುತ್ತವೆ ಎಂದರೆ ಸರಿ. ಸೋಲಾರ್ ತಂತಿಗೆ ಜಿ-ವೈರ್ ಹಾಕಿರುತ್ತಾರೆ ಎಂದರೆ ಸರಿ. ಸೋಲಾರ್ ತಂತಿ ಮನುಷ್ಯರಿಗೆ ಅಥವಾ ಪ್ರಾಣಿಗಳಿಗೆ ತಾಗಿದರೆ ಯಾವುದೇ ಜೀವ ಹಾನಿ ಆಗುವುದಿಲ್ಲ ಎಂದರೆ ಸರಿ. ಕಂಬ ಬಿದ್ದ ಬಗ್ಗೆ ಯಾರಿಗೂ ಸಹ ಗೊತ್ತಿರಲಿಲ್ಲ ಎಂದರೆ ಸರಿ ಏಕೆಂದರೆ ಆ ದಿನ ರಾತ್ರಿ ಮಳೆ ಹೆಚ್ಚಾಗಿ ಕಂಬ ಬಿದ್ದಿತ್ತು. ಆ ರೀತಿ ಕಂಬ ಬಿದ್ದಿದ್ದನ್ನು ಯಾರು ನೋಡಿರುವದಿಲ್ಲ ಎಂದರೆ ಸರಿ. ಆವತ್ತೆ ಮಳೆಯಾಗಿ ಕಂಬ ಬಿದ್ದಿದ್ದವು ಎಂದರೆ ಸಾಕ್ಷಿಯು ಕಂಬ ಬಿದ್ದು 2 ದಿನಗಳು ಆಗಿದ್ದವು ಎಂದು ಹೇಳುತ್ತಾರೆ. ಪೋಲಿಸರು ನನ್ನ ಹೇಳಿಕೆಯಲ್ಲಿ ಬರೆದ ವಿಷಯವನ್ನು ನನಗೆ ಓದಿ ಹೇಳಿರುವುದಿಲ್ಲ. 2-3 ದಿನಗಳ ಹಿಂದೆ ಕಂಬಗಳು ಬಿದ್ದಿದ್ದವು ಎಂದು ನನ್ನ ಹೇಳಿಕೆಯಲ್ಲಿ ಬರೆಸಿರುತ್ತೇನೆ. 2-3 ದಿನಗಳ ಹಿಂದೆ ಕಂಬಗಳು ಬಿದ್ದಿದ್ದವು ಎಂದು ನಿಮಗೆ ಹೇಗೆ ಗೊತ್ತಾಯಿತು ಎಂದರೆ ಆತನು ಮೃತ ಪಟ್ಟ ದಿನದಂದು ನನಗೆ ಗೊತ್ತಾಯಿತು ಎಂದು ಹೇಳುತ್ತಾರೆ. 2-3 ದಿನಗಳ ಹಿಂದೆ ವಿದ್ಯುತ್ ಕಂಬಗಳು ಬಿದ್ದಿರುತ್ತವೆ ಎಂದು ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿಯು ಕರೆಂಟ್ ನವರು ಹೇಳಿರುತ್ತಾರೆ ಎಂದು ಹೇಳುತ್ತಾರೆ. ಕಂಬ ಬಿದ್ದ ಸ್ಥಳದ ಕಡೆಗೆ ಮಾಲೀಕರು ಹೋಗಿದ್ದರಾ ಅಥವಾ ಇಲ್ಲವೂ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 2-3 ದಿನಗಳ ಹಿಂದೆ ಕಂಬಗಳು ಬಿದ್ದಿರುವ ವಿಷಯವನ್ನು ಕೆ.ಇ.ಬಿ. ರವರು ನನಗೆ ಹೇಳಿದ್ದರು ಎಂದು ನನ್ನ ಹೇಳಿಕೆಯಲ್ಲಿ ನಾನು ಹೇಳಿದ್ದೆ. ನಾನು ಪೋಲಿಸರ ಮುಂದೆ ಕೆ.ಇ.ಬಿ. ರವರು ಕಂಬಗಳು ಬಿದ್ದ ವಿಷಯವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ವಿದ್ಯುತ್ ಕಂಬಗಳು 1 ನೇ ಆರೋಪಿತನ ಜಮೀನಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಂಬಗಳು ಶಿವನಗೌಡನ ಜಮೀನಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ತಂತಿಯು ಸಹ ಶಿವನಗೌಡನ

ಜಮೀನಿನಲ್ಲಿ ಬಿದ್ದಿತ್ತು ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಾವನ ಜೊತೆಗೆ ಮೇವು ತರಲು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು 3 ಜನರು ಮೇವು ತರಲು ಹೋಗಿದ್ದೆವು ಎಂದು ಹೇಳುತ್ತಾರೆ. ನಾನು ನನ್ನ ಮಾವನವರಿಗೆ ಸಹಾಯ ಮಾಡುವ ಉದ್ದೇಶದಿಂದ 3 ಜನರು ಮೇವು ತರಲು ಹೋಗಿದ್ದೆವು ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನೆಯನ್ನು ನೋಡದೆ ಇದ್ದರು ಸಹ ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವನವರು ಪರಿಹಾರ ಹಣವನ್ನು ಪಡೆಯುವ ಸಲುವಾಗಿ ನಾನು ಸುಳ್ಳು ಸಾಕ್ಷ ಹೇಳುತ್ತಿದ್ಧೇನೆ ಎಂದರೆ ಸರಿಯಲ್ಲ. ಆರೋಪಿತರ ಯಾವುದೇ ತಪ್ಪು ಇರದೆ ಇದ್ದರು ಸಹ ನಾನು ಅವರ ವಿರುದ್ದ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಜೆ.ಎಂ.ಎಫ್.ಸಿ., ದೇವದುರ್ಗ